ಸಿ.ಸಿ. ನಂಬರ್‌ಃ **1336/2024**

ಪಿ.ಡಬ್ಲ್ಯೂಃ**1**

ದಿಃ**03-11-2025** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರವರಿಂದ.**

1. ಈ ಪ್ರಕರಣದ ಬಗ್ಗೆ ನನಗೆ ಪೂರ್ತಿ ಮಾಹಿತಿ ಇರುತ್ತದೆ. ಆರೋಪಿ ಮತ್ತು ನಾನು ಒಂದೇ ಜನಾಂಗಕ್ಕೆ ಸೇರಿದವರು. ಆರೋಪಿಯು ಪತ್ತಾರಕಿಯನ್ನು ಮಾಡುತ್ತಿದ್ದ. ಸುಮಾರು 15-20 ವರ್ಷಗಳಿಂದ ಆರೋಪಿಯು ನನಗೆ ಪರಿಚಯ. ಆರೋಪಿಗೆ ನಾನು ಹಂತ ಹಂತವಾಗಿ ರೂ.4,80,000/- ಗಳನ್ನು ಕೊಟ್ಟಿರುತ್ತೇನೆ. ಸದರಿ ಹಣವನ್ನು ನಾನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಆರೋಪಿಯು ಮನೆಗೆ ಬಂದು ತೆಗೆದುಕೊಂಡು ಹೋಗಿರುತ್ತಾನೆ, ಯಾರೂ ಸಾಕ್ಷಿದಾರರು ಇರುವುದಿಲ್ಲ. ಸಾಲದ ಕರಾರು ಪತ್ರ ಬರೆಸಿಕೊಳ್ಳುವಾಗ ಸಾಕ್ಷಿ ಎಂದು ಸಂಜಯ ಮುರುಡೇಶ್ವರ ಎಂಬುವವನು ಇದ್ದ, ಆತನು ಈಗ ತೀರಿಕೊಂಡಿರುತ್ತಾನೆ. ನ್ಯಾಯಾಲಯದಲ್ಲಿ ಬಾಂಡನ್ನು ಬರೆದಿರುತ್ತೇವೆ. ಸದರಿ ಸಮಯದಲ್ಲಿ ನಾಲ್ಕು ಚೆಕ್ ಗಳನ್ನು ಪಡೆದುಕೊಂಡಿರುತ್ತೇನೆ. ಆರು ಆರು ತಿಂಗಳಿನಂತೆ ಒಂದರಂತೆ ನಾಲ್ಕು ಚೆಕ್ ಗಳನ್ನು ಆರೋಪಿಯು ಕೊಟ್ಟಿದ್ದ.

2. ಈ ಪ್ರಕರಣದಲ್ಲಿ ನಾನು ರೂ.1,30,000/- ಗಳನ್ನು ನಾನು ಹಾಜರು ಪಡಿಸಿರುತ್ತೇನೆ. ಇನ್ನೂ ಮೂರು ಚೆಕ್ ಗಳು ನನ್ನ ಹತ್ತಿರ ಇರುತ್ತವೆ. ಉಳಿದ ಮೂರು ಚೆಕ್ ಗಳು Account Blocked ಎಂದು ಹಿಂದಿರುಗಿ ಬಂದಿರುತ್ತವೆ. ಅವುಗಳನ್ನು ಈ ಪ್ರಕರಣದಲ್ಲಿ ನಮೂದಿಸಿರುವುದಿಲ್ಲ. ಸದರಿ ಮೂರು ಚೆಕ್ ಗಳ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣದಲ್ಲಿ ದಾಖಲಿಸಿಲ್ಲ. ಸದರಿ ಮೂರು ಚೆಕ್ ಗಳ ಬಗ್ಗೆ ಈ ದೂರಿನಲ್ಲಿ ನಮೂದು ಮಾಡಿದ್ದೇನೆ ಎಂದರೆ ಸರಿ. ನಾನು ಸಹ ಅಕ್ಕಸಾಲಿಗನಿದ್ದೇನೆ. ಬ್ಯಾಂಕ್ ನ ವ್ಯವಹಾರದ ಬಗ್ಗೆ ಗೊತ್ತಿಲ್ಲ, ಆದರೆ ಚೆಕ್ ಪಡೆದುಕೊಳ್ಳುವುದು ಬ್ಯಾಂಕ ಗೆ

ಹಾಕುವುದು ಮಾಡುತ್ತೇನೆ. ಚೆಕ್ ಬೌನ್ಸ್ ಆದ ನಂತರ ನ್ಯಾಯಾಲಯದಲ್ಲಿ ಪ್ರಕರಣವನ್ನು ಹಾಕುತ್ತೇನೆ ಎಂದರೆ ಸರಿ. ಯಾವುದೇ ರೀತಿ ಅಗ್ರಿಮೆಂಟ್ ಪ್ರಕಾರ ಹಣವನ್ನು ಆರೋಪಿ ಕೊಟ್ಟಿಲ್ಲ, ಆದರೆ ಧಮಕಿ ಹಾಕಿ ಕರಾರು ಪತ್ರವನ್ನು ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರೀತಿ ಮತ್ತು ಸ್ವಾತಿ ನಿಮಗೆ ಏನು ಆಗಬೇಕು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮನೆಗೆ ಏಕಾ ಏಕೀ ನಾಲ್ಕು ಜನರು ಬಂದು ಅದೇ ದಿನ ನ್ಯಾಯಾಲಯಕ್ಕೆ ಬಂದು ಧಮಕಿ ಹಾಕಿ ಕರಾರು ಪತ್ರ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

3. ಸಂಜಯ ಮುರುಡೇಶ್ವರ, ಎಚ್ ಆರ್ ನಾಗರಾಜ ಹಾಗೂ ಮಂಜುನಾಥ ರಾಯ್ಕರ ಎಲ್ಲರೂ ಕೂಡಿ ರೈಲ್ವೇ ಇಲಾಖೆಯಲ್ಲಿ ನೌಕರಿ ಸಲುವಾಗಿ ಓಡಾಡುತ್ತಿದ್ದರು, ಆ ಸಮಯದಲ್ಲಿ ನನ್ನನ್ನು ಈ ಮೂರು ಜನರು ಭೇಟಿ ಆದರು ಎಂದರೆ ಸರಿಯಲ್ಲ. ರೈಲ್ವೇ ಇಲಾಖೆಯ ನಿವೃತ್ತ ನೌಕರನಾದ ಕೆ. ಬರನಾಬಸ ಈತನು ನೌಕರಿ ಮಾಡಿಕೊಡುತ್ತೇನೆ ಎಂದು ಹೇಳಿದ್ದ ಎಂದರೆ ಸರಿಯಲ್ಲ. ಹಾಗಾಗಿ ನನ್ನ ಮಕ್ಕಳಾದ ಪ್ರೀತಿ ಮತ್ತು ಸ್ವಾತಿಗೂ ಸಹ ನೌಕರಿ ಮಾಡಿಕೊಡಿ ಎಂದು ಸಂಜಯ  ಮುರುಡೇಶವ್ವರ ರವರಿಗೆ ಭೇಟಿ ಆದರು ಎಂದರೆ ಸರಿಯಲ್ಲ. ಒಂದು ಕ್ಯಾಂಡಿಡೇಟ್ ಗೆ ರೂ.5,00,000/- ಮಾತು ಆಗಿತ್ತು ಎಂದರೆ ಸರಿಯಲ್ಲ. ನಾನು, ಆರೋಪಿ, ಸಂಜಯ ಮುರುಡೇಶ್ವರ, ಎಚ್ ಆರ್ ನಾಗರಾಜ ಹಾಗೂ ಮಂಜುನಾಥ ರಾಯ್ಕರ ಕೂಡಿಕೊಂಡು ಕೆ. ಬರನಾಬಸ ಈತನ ಕಡೆಗೆ ಹೋಗಿ ಭೇಟಿ ಆಗಿ ಬಂದಿದ್ದೆವು ಎಂದರೆ ಸರಿಯಲ್ಲ.

4. ಸದರಿ ಸಮಯದಲ್ಲಿ ಒಟ್ಟು ಇಪ್ಪತ್ತು ಜನರ ದಾಖಲೆಗಳನ್ನು ನನ್ನ ಮಕ್ಕಳ ದಾಖಲೆಯ ಸಹಿತ ಕೆ ಬರನಾಬಸಗೆ ನೀಡಿ ಬಂದಿದ್ದೆವು ಎಂದರೆ ಸರಿಯಲ್ಲ. ಮೂರ್ನಾಲ್ಕು ವರ್ಷಗಳ ನಂತರ ನೌಕರಿ ಆಗದೇ ಇದ್ದಾಗ ನನಗೆ ಕೆ. ಬರನಾಬಸ ಸಂಬಂಧ ಇಲ್ಲ ಎಂದು ಹೇಳಿದೆನು ಎಂದರೆ ಸರಿಯಲ್ಲ. ನಾನು ಒತ್ತಾಯ ಮಾಡಿದಾಗ ಆರೋಪಿಯು ಕೆ. ಬರನಾಬಸ ಮೇಲೆ ವಿದ್ಯಾಗಿರಿ ಪೋಲಿಸ್ ಠಾಣೆಯಲ್ಲಿ ದೂರು ನೀಡಿದ್ದ ಎಂದರೆ ಗೊತ್ತಿಲ್ಲ. ಕೆ. ಬರನಾಬಸ ರವರನ್ನು ಪೋಲಿಸರು ಕರೆಯಿಸಿ ದಿಃ09-03-2023 ರಂದು ಒಂದು ಹಣ ಕೊಡುವ ಬಗ್ಗೆ ಒಂದು ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಅಗ್ರಿಮೆಂಟ ಸಮಯದಲ್ಲಿ ಎರಡು ಚೆಕ್ ಗಳನ್ನು ಎಸ್ ನಾಗರಾಜ ಈತನಿಗೆ

ಹಾಗೂ ಎರಡು ಆರೋಪಿತನಿಗೆ ಕೆ. ಬರನಾಬಸ ಕಡೆಯಿಂದ ಪೋಲಿಸರು ಇಸಿದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಎಸ ಆರ್ ನಾಗರಾಜ ಎನ್ನುವವರು ಕೆ. ಬರನಾಬಸ ರವರ ಮೇಲೆ ಗೌರವಾನಿಗೆ ಮೂರನೇ ಜೆ ಎಮ್ ಎಫ ಸಿ ನ್ಯಾಯಲಯದಲ್ಲಿ ಚೆಕ್ ಬೌನ್ಸ ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ಮಕ್ಕಳ ನೌಕರಿ ಸಲುವಾಗಿ ಹಣವನ್ನು ಕೊಟ್ಟಿದ್ದರೂ ಸಹ ನಾನು ಆರೋಪಿತರ ಮೇಲೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಒಂದೇ ಚೆಕ್ ನ್ನು ಬ್ಯಾಂಕ್ ಗೆ ಹಾಜರು ಮಾಡಿ ಅದರಲ್ಲಿ ನಾಲ್ಕು ಚೆಕ್ ನ ಮೊತ್ತವನ್ನು ಸೇರಿಸಿ ಬ್ಯಾಂಕ್ ಗೆ ಹಾಜರು ಪಡಿಸಿ ಸುಳ್ಳು ಪ್ರಕರಣವನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಹಣ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಸಂಬಂಧಿಕನು ಇದ್ದರೂ ಸಹ ಆತನಿಂದ ಹಣವನ್ನು ವಸೂಲಿ ಮಾಡಬೇಕು ಎಂದು ಸುಳ್ಳು ಪ್ರಕರಣ ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು**.)**

ಓ**.** ಹೇ**.** ಕೆ**.** ಸರಿ ಇದೆ**.** ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ**.**ಎಂ**.**ಎಫ್**.**ಸಿ**.** ಧಾರವಾಡ**.**